## ಮಾರ್ ಡಾಲಾ


ನಮ್ಮ ಚಿಕ್ಕಪ್ಪ ಭಾರತೀಯ ರೈಲು ವಿಭಾಗದಲ್ಲಿ ಸೇವೆ ಸಲ್ಲಿಸುತಿದ್ದಾಗ ನಡೆದ ಘಟನೆ. ಅವರು ಕೆಲಸಕ್ಕೆ ಹೋಗುವ ಸ್ವಲ್ಪ ಸಮಯ ಮುಂಚೆ ಅವರನ್ನು ಕರೆಯಲು ಕಾಲ್ ಬಾಯ್ ಬರುತ್ತಿದ್ದ. ಒಂದು ಮುಂಜಾನೆ ಸ್ನಾನದ ಕೋಣೆಯಲ್ಲಿ ಹಾವು ಬಂದಾಗ ಚಿಕ್ಕಮ್ಮ ಹಾವನ್ನು ಕೊಂದು ಹಾಕಿದ್ದರು. ಅನಂತರ ಅವರು ಅಂಗಳದಲ್ಲಿ ತಲೆ ಬಗ್ಗಿಸಿ ರಂಗೋಲಿ ಹಾಕುತ್ತಿದ್ದಾಗ ಕಾಲ್ ಬಾಯ್ ಬಂದ.'ಸಾಬ್ ಹೈ ಕ್ಯಾ?' ಎಂದು ಹಿಂದಿಯಲ್ಲಿ ಕೇಳಿದ. ಚಿಕ್ಕಮ್ಮಗೆ 'ಸಾಬ್' ಬದಲು 'ಸಾಪ್' ಎಂದು ಕೇಳಿಸಿದೆ. ಅವರು, 'ಮಾರ್ ಡಾಲಾ' ಎಂದು ಉತ್ತರಿಸಿದಾಗ ಕಾಲ್ ಬಾಯ್ ಭಯದಿಂದ ಕಿರುಚಿದ್ದಾನೆ. ಚಿಕ್ಕಪ್ಪ ಹೊರಗೆ ಬಂದ ಮೇಲೆ ಪರಿಸ್ಥಿತಿ ಹಾಸ್ಯ ರೂಪಕ್ಕೆ ತಿರುಗಿತ್ತು.

**ಪ್ರಮೋದ್ ಕೆ. ಕುಲಕರ್ಣಿ**



## ಮೀನಾಕ್ಷೀ... ಮೀನಾಕ್ಷೀ...

ಕಣ್ಣಿನ ಆಸ್ಪತ್ರೆಗೆ ಹೋಗಿದ್ದೆ. ತುರ್ತು ಚಿಕಿತ್ಸೆಗೆ ಒಳಪಡಿಸಿ, ನನ್ನ ಫೈಲ್ ಮೇಲೆ ಎಮರ್ಜೆನ್ಸಿ



ಕಲೆ: ಗಣೇಶ ಆಚಾರ್ಯ

ಎಂದು ಬರೆದು ಕೊಟ್ಟರು. ಮತ್ತೆ ಮಾರನೇದಿನ ಹೋಗಬೇಕಾಯಿತು. ಒಂದು ಶಾಲೆಯ ಮಕ್ಕಳನ್ನು ಕಣ್ಣಿನ ಪರೀಕ್ಷೆಗೆ ಕರೆದುಕೊಂಡು ಬಂದಿದ್ದರು. ನನ್ನ ಫೈಲ್ ಡಾಕ್ಟರ್ ಬಳಿ ಹೋದಾಗ ಸಹಾಯಕರು 'ಮೀನಾಕ್ಷಿ... ಮೀನಾಕ್ಷಿ' ಎಂದು ಕರೆದರು. ನಾನು ನರ್ಸ್‌ಅನ್ನು ಹಿಂಬಾಲಿಸಿದೆ. ಆಗ ಕೆಲ ಮಕ್ಕಳು, 'ಮೀನಾಕ್ಷೀ... ಮೀನಾಕ್ಷೀ... ಎಂತಹ ಮಕ್ಕಳಿಗೆ ಜನ್ಮ ಕೊಟ್ಟೆಯೇ?' ಎಂದು ಪಿಸುಗುಟ್ಟುತ್ತಿರುವುದು ಕೇಳಿಸಿತು. ಜೀವನ ಚೈತ್ರ ಸಿನಿಮಾ ಪ್ರಸಾರವಾಗುವ ಬಗ್ಗೆ ಒಂದು ಚಾನೆಲ್‌ನವರು ಪದೇ ಪದೇ ಆ ಸಮಯದಲ್ಲಿ ಪ್ರೋಮೋ ಕೊಡುತ್ತಿದ್ದರು. ಅದರಲ್ಲಿ ಡಾ. ರಾಜ್ ಹೇಳುವ ಈ ಡೈಲಾಗನ್ನೇ ಮತ್ತೆ ಮತ್ತೆ ಹಾಕುತ್ತಿದ್ದರು. ಬಹುಶಃ ಅದರ ಪ್ರಭಾವಕ್ಕೊಳಗಾದ ಮಕ್ಕಳು, ನನ್ನ ಹೆಸರನ್ನು ಕರೆದು ಖುಷಿ ಅನುಭವಿಸಿದರೇನೋ... ನಾನು ನಕ್ಕು ಸುಮ್ಮನಾದೆ.

**ಬಿ.ಕೆ. ಮೀನಾಕ್ಷಿ**